## ನನ್ನ ಓದು

ಅನ್ಯಾಯವೆಂಬ ನೋವು ಈ ಮೊದಲ ಅಧ್ಯಾಯಗಳಲ್ಲಿ ವ್ಯಕ್ತವಾಗಿದೆ. ಒಟ್ಟು ಇನ್ನೂರ ಇಪ್ಪತ್ತು ಶಾಸನಗಳಲ್ಲಿ ದೊರೆಯುವ ಮಾಹಿತಿಯು ಧಾರ್ಮಿಕ ಸ್ವರೂಪದಿಂದ ಊಳಿಗಮಾನ್ಯ ಪದ್ಧತಿಯಾಗಿ ಆನಂತರ ಸಾಮ್ರಾಟರ, ಶ್ರೀಮಂತ ಜಮೀನ್ದಾರ, ಬ್ರಾಹ್ಮಣ, ವಿದ್ವಾಂಸ, ವರ್ತಕ, ಪಾಳೇಗಾರರ ಮನರಂಜನೆಯ ವಸ್ತುವಾಗಿ ದೇವದಾಸಿ ಎಂಬ ಪರಿಕಲ್ಪನೆ ಬದಲಾಗುತ್ತ ಬಂದಿದ್ದನ್ನು ಸೂಚಿಸುತ್ತಾರೆ. ಭರತನ ನಾಟ್ಯಶಾಸ್ತ್ರವು ಆಸ್ಥಾನ ನರ್ತಕಿಯರ ವರ್ಗೀಕರಣ, ಅದಕ್ಕೆ ಆಧಾರವಾದ ಅವರ ದೈಹಿಕ ಲಕ್ಷಣ, ಅವರ ಕೌಶಲಗಳನ್ನು ಕುರಿತು ಹೇಳುವ ಮಾತುಗಳತ್ತ ಗಮನ ಸೆಳೆಯುತ್ತಾರೆ.

ದಕ್ಷಿಣ ಭಾರತದ ದೇವಸ್ಥಾನಗಳಲ್ಲಿ ಅರ್ಚಕರಲ್ಲದೆ ಇಪ್ಪತ್ತನಾಲ್ಕು ಬಗೆಯ ವೃತ್ತಿ ಸೇವಕರು ಇದ್ದದ್ದು, ಅವರೆಲ್ಲರಲ್ಲರಿಗೂ ಜಮೀನು ನೀಡಿದ್ದು, ದೇವದಾಸಿಯರಿಗೆ ಪ್ರಧಾನ ಪುರೋಹಿತರ ನಂತರದ ಸ್ಥಾನವಿದ್ದದ್ದು ಮುಂತಾದ ಸಂಗತಿಗಳನ್ನು ತಂಜಾವೂರು ಬೃಹದೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಚೋಳ ಅರಸರು ಹೊರಡಿಸಿರುವ ಶಾಸನಗಳ ಮುಖಾಂತರ ತಿಳಿಸುತ್ತಾರೆ. ಬ್ರಿಟಿಷ್ ಆಳ್ವಿಕೆ ಆರಂಭಗೊಂಡ ನಂತರ ವಿಕ್ಟೋರಿಯನ್ ನೈತಿಕತೆಯನ್ನು ಅಂಗೀಕರಿಸಿ ರೂಪುಗೊಂಡ ಧೋರಣೆಗಳು ದೇವದಾಸಿ ಸಮುದಾಯದ ಪ್ರಾಮುಖ್ಯ ಕಡಮೆಯಾಗಲು ಕಾರಣವಾಗಿರಬಹುದು. ಮೈಸೂರಿನ ಅರಸರಾದ ಹತ್ತನೆಯ ಚಾಮರಾಜ ಒಡೆಯರ್ ಅವರು ಥಿಯಸಾಫಿಕಲ್ ಸೊಸೈಟಿಯ ಒತ್ತಾಯಕ್ಕೆ ಮಣಿದು ನಂದಿಬೆಟ್ಟದ ದೇವಸ್ಥಾನದಲ್ಲಿ ದೇವದಾಸಿಯರ ನರ್ತನ ನಿಲ್ಲಿಸಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಗೆಜ್ಜೆಪೂಜೆಯ ಪದ್ಧತಿಯನ್ನು ಮತ್ತು ದೇವದಾಸಿಯರು ಸಂಸ್ಥಾನದ ದೇವಸ್ಥಾನಗಳಲ್ಲಿ ನರ್ತಿಸುವ ಪದ್ಧತಿಯನ್ನು 1909 ಮತ್ತು 1910 ರಲ್ಲಿ ನಿಷೇಧಿಸಿದ ಪ್ರಸಂಗವನ್ನು ಜಗದೀಶ್ ಉಲ್ಲೇಖಿಸುತ್ತಾರೆ.

ಹಾಗೆಯೇ ತಿರುವಾಂಕೂರಿನ ದೇವಸ್ಥಾನಕ್ಕೆ ಪರೈವಿ ಎಂಬ ದೇವದಾಸಿ ಒಂದು ಸಾವಿರ ಚಿನ್ನದ ನಾಣ್ಯ, ನಾಲ್ಕು ಕಿಲೋ ಮತ್ತು ಇನ್ನೂರ ಎಂಬತ್ತು ಗ್ರಾಮ್ ಚಿನ್ನ, ಹವಳ ಮತ್ತು ಹದಿನಾರು ವಜ್ರಗಳನ್ನು ದಾನವಾಗಿ ನೀಡಿದ ನಿದರ್ಶನವನ್ನು ನೋಡಿದರೆ ದೇವದಾಸಿಯರು ತಮ್ಮ ಸಂಪತ್ತನ್ನು ಸಾಮಾಜಿಕ ಕಾರ್ಯಗಳಿಗೆ ಉಪಯೋಗಿಸುತಿದ್ದರು ಅನ್ನುವ ಊಹೆ ಮೂಡುತ್ತದೆ. ಕರ್ನಾಟಕದಲ್ಲೇ ಚನ್ನಗಿರಿಯ ತಾಲ್ಲೂಕಿನಲ್ಲಿರುವ ಸೂಳೆ ಕೆರೆಯಂಥ ಹಲವು ಕೆರೆಗಳನ್ನು ದೇವದಾಸಿಯರು ನಿರ್ಮಿಸಿದ ಉದಾಹರಣೆಗಳೂ ಇವೆ. ಇಂಥ ಸಂಗತಿಗಳನ್ನು ದೇವದಾಸಿಯರ ಸಾಂಸ್ಕೃತಿಕ ವೈಭವದ ಇತಿಹಾಸ ಎಂಬ ಅಧ್ಯಾಯವು ತಿಳಿಸುತ್ತದೆ.

'ಆಗಮ ಸಂಸ್ಕೃತಿಯಲ್ಲಿ ದೇವದಾಸಿಯರು' ಎಂಬ ಅಧ್ಯಾಯವು ದೇವದಾಸಿ ಪದ್ಧತಿಯ ಹಿನ್ನಲೆಯಲ್ಲಿರುವ ತಾತ್ವಿಕ ಭಿತ್ತಿಯನ್ನು ಚಿತ್ರಿಸಿ ಅದು ಹೇಗೆ ಉತ್ತರ ಭಾರತದ ತವಾಯಿಫ್ ಪದ್ಧತಿಗಿಂತ ಭಿನ್ನವೆಂಬ ಸೂಚನೆಯನ್ನು ನೀಡುತ್ತದೆ. ಇದೇ ಸಂಗತಿ ಮತ್ತೆ ಪುಸ್ತಕದ ಹನ್ನೊಂದು ಮತ್ತು ಹನ್ನೆರಡನೆಯ ಅಧ್ಯಾಯಗಳಲ್ಲಿ ವಿಸ್ತಾರವಾಗಿ ಚರ್ಚೆಗೆ ಒಳಪಟ್ಟಿದೆ. ದೇವದಾಸಿಯರ ನೃತ್ಯ ಪರಂಪರೆಯ ಇತಿಹಾಸ, ತಂಜಾವೂರು, ಮೈಸೂರು, ಆಂಧ್ರ ಮತ್ತು ಒಡಿಯಾ ದೇವದಾಸೀ ನೃತ್ಯಪರಂಪರೆಗಳ ವೈಶಿಷ್ಟ್ಯವನ್ನು ಮೂರು ಅಧ್ಯಾಯಗಳಲ್ಲಿ ಜಗದೀಶ್ ಅವರು ವಿವರಿಸಿದ್ದಾರೆ. ದೇವಾಲಯಗಳು ಮತ್ತು ನಾಟ್ಯಶಿಲ್ಪವೆಂಬ ಅಧ್ಯಾಯದಲ್ಲಿ ದಕ್ಷಿಣ ಮತ್ತು ಉತ್ತರ ಭಾರತದ ಶಿಲ್ಪಗಳಲ್ಲಿ ದೇವದಾಸಿಯರ ನರ್ತನ, ಸಂಗೀತಗಳ ವಿವರ ದೃಶ್ಯವತ್ತಾಗಿ ರೂಪುಪಡೆದಿರುವ ವಿವರಗಳು ದೊರೆಯುತ್ತವೆ.

ಇವು ಹೊರಮುಖದ ವಿವರಗಳಾದರೆ ದೇವದಾಸಿಯರು ದಾನದ ಮೂಲಕ, ದೀಕ್ಷೆಯ ಮೂಲಕ, ಮಾರಾಟದ ಮೂಲಕ ದೇವಾಲಯಗಳಿಗೆ ರಾಜರ ಆಸ್ಥಾನಗಳಿಗೆ ಸಲ್ಲುತ್ತಿದ್ದ ವಿವರಗಳಿವೆ. ದೇವರನ್ನು ಮದುವೆಯಾಗಿ, ದೇವರನ್ನೆ ಗಂಡನೆಂದು ನಂಬಿ ನಡೆದುಕೊಳ್ಳುವ ಕ್ರಮವಿತ್ತು ಎಂಬ ವಿವರಗಳು ಕನ್ನಡದ ವಚನಕಾರ್ತಿಯರ ಬಗ್ಗೆ ಹೊಸ ನೋಟದ ಸಾಧ್ಯತೆಯನ್ನು ಹೊಳೆಯಿಸುವಂತಿವೆ. ಧರ್ಮ, ಕಲೆಗಳು ಮಾತ್ರವಲ್ಲದೆ ಪ್ರವಾಸಿಗರಿಗೆ, ವಾಣಿಜ್ಯ ಉದ್ದೇಶಗಳಿಗೆ, ಯುದ್ಧ ಸಮಯದಲ್ಲಿ ಸೈನಿಕರ ಸೇವೆಗೆ ಒದಗುತ್ತಿದ್ದ ಮಹಿಳೆಯರು ಹಣ ಪ್ರಧಾನವಾಗಿ